3) *ರಾಷ್ಟ್ರೀಕೃತ ಮಾರ್ಗಗಳಲ್ಲಿ ಎಷ್ಟು ಖಾಸಗೀ ವಾಹನಗಳು (ಲಕ್ಸೂರಿ ಬಸ್ಸುಗಳು) ಈಗ ಸಂಚರಿಸುತ್ತವೆ?*

4) *ಖಾಸಗೀ ವಾಹನಗಳ ಸಂಚಾರದಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ನಷ್ಟ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

5) *ಬಂದಿದ್ದಲ್ಲಿ ಇದರ ಅಂದಾಜು ನಷ್ಟ ಎಷ್ಟು?*

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

1) ಹೌದು. ಈ ಖಾಸಗೀ ಬಸ್ಸುಗಳು (ಲಕ್ಸೂರಿ) ಟೂರಿಸ್ಟ ವಾಹನ ಪರವಾನಗಿ ಹೊಂದಿದ್ದು, ಟೂರಿಸ್ಟ ಪ್ರಯಾಣಿಕರನ್ನು ಕೊಂಡೊಯ್ಯಲು ಅನುಮತಿ ನೀಡಲಾಗಿದೆ.

2) ಇಲ್ಲ.

3) 1088 ಬಸ್ಸುಗಳು ಟೂರಿಸ್ಟ್ ವಾಹನ ಪರವಾನಗಿಯ ಆಧಾರದ ಅಡಿಯಲ್ಲಿ ಸಂಚರಿಸುತ್ತಿವೆ.

4) ಈ (ಖಾಸಗಿ ಬಸಗಳು) ಟೂರಿಸ್ಟ್ ವಾಹನಗಳು ಸಂಚರಿಸಲು ನೀಡಿರುವ ಪರವಾನಗಿ ಉದ್ದೇಶ ಬೇರೆಯಾಗಿದ್ದು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳು ಸಂಚರಿಸುವ ಉದ್ದೇಶವೇ ಬೇರೆಯಾಗಿರುತ್ತದೆ. ಆದ್ದರಿಂದ ನಷ್ಟ ಉಂಟಾಗುತ್ತಿದೆ ಎಂಬ ಪ್ರಶ್ನೆಯು ಉದ್ಭವಿಸುವುದಿಲ್ಲ.

5) ಉದ್ಭವಿಸುವುದಿಲ್ಲ.

**ಶೂರಪುರ ವಿಭಾಗದಲ್ಲಿರುವ ವಾಹನಗಳು**

2019 - ಶ್ರೀ ರಾಜ ವೆಂಕಟಪ್ಪ ನಾಯಕ್ (ಶೂರಪುರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಲ್ಬರ್ಗಾ ವಿಭಾಗದ ಶೊರಾಪುರ್ ಘಟಕದಲ್ಲಿರುವ ಅನುಸೂಚಿಗಳ ಹಾಗೂ ವಾಹನಗಳ ಸಂಖ್ಯೆ ಎಷ್ಟು?*

ಆ) *ನಿರುಪಯುಕ್ತ ವಾಹನಗಳ ರದ್ದತಿ ಹಾಗೂ ಬದಲಾಯಿಸಿದ ವಾಹನಗಳ ಸಂಖ್ಯೆ ಎಷ್ಟು?*

ಇ) *ಯಾದಗಿರಿ ಘಟಕದ ಅನುಸೂಚಿ ಸಂಖ್ಯೆ 61 ಮತ್ತು 31ನ್ನು ಆಚರಣೆ ಮಾಡದಿರುವುದಕ್ಕೆ ಕಾರಣಗಳು?*

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) ಗುಲ್ಬರ್ಗಾ ವಿಭಾಗದ ಶೋರಾಪುರ್ ಘಟಕದಲ್ಲಿ ದಿನಾಂಕ : 01-9-199ಕ್ಕೆ 79 ಅನುಸೂಚಿಗಳಿಗೆ 89 ವಾಹನ ಬಲ ಹೊಂದದಿ ಕಾರ್ಯಾಚರಣೆ ಮಾಡುತ್ತಿವೆ.

ಆ) ಈ ಘಟಕಕ್ಕೆ ನೀಡಿದ ಒಟ್ಟಾರೆ ವಾಹನಗಳ ರದ್ದತಿ ಹಾಗೂ ಒಟ್ಟಾರೆ ಹೊಸ ವಾಹನಗಳ ವಿವರ ಈ ಕೆಳಕಂಡಂತಿದೆ.

| ಅವಧಿ | ಒಟ್ಟಾರೆ ರದ್ದತಿ ವಾಹನಗಳು | ಒಟ್ಟಾರೆ ಹೊಸ ವಾಹನಗಳನ್ನು ಬದಲಾವಣೆಗಾಗಿ ನೀಡಿದ್ದು. |
|---|---|---|
| ಏಪ್ರಿಲ್ 94 ರಿಂದ ಮಾರ್ಚ್ 95 | 12 | 14 |
| ಏಪ್ರಿಲ್ 95 ರಿಂದ ಆಗಸ್ಟ್ 95 | 02 | 05 |

ಇ) ಯಾದಗಿರಿ ನಾಲತವಾಡ ಮಾರ್ಗದಲ್ಲಿ ಆಚರಣೆಯಾಗುತ್ತಿದ್ದ ಅನುಸೂಚಿ ಸಂಖ್ಯೆ 61ನ್ನು ಜನಪ್ರಿಯಗೊಳ್ಳದಿರುವ ಕಾರಣ ರದ್ದು ಪಡಿಸಲಾಗಿದೆ.

ಅನುಸೂಚಿಗಳ ಸಂಖ್ಯೆ 30 ಮತ್ತು 31ನ್ನು ಯಾದಗಿರಿ-ಶೋರಾಪುರ್ ಮತ್ತು ಯಾದಗಿರಿ ತಾಳಿಕೋಟೆ ಮಾರ್ಗಗಳ ಮೇಲೆ ಆಚರಣೆ ಮಾಡಲಾಗುತ್ತಿದೆ. ಅವುಗಳನ್ನು ರದ್ದುಪಡಿಸಿರುವುದಿಲ್ಲ.

**ಪುತ್ತೂರು ತಾಲ್ಲೂಕಿನ ಸಕ್ರಮೀಕರಣ ಅರ್ಜಿಗಳು**

2020 - ಶ್ರೀ ಡಿ.ವಿ. ಸದಾನಂದ : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಪುತ್ತೂರು ತಾಲ್ಲೂಕಿನಲ್ಲಿ ಬಂದ ಒಟ್ಟು ಭೂ ಸಕ್ರಮೀಕರಣ ಅರ್ಜಿಗಳೆಷ್ಟು; ಇದರಲ್ಲಿ ಕಾನೂನಿನ ಚೌಕಟ್ಟಿನಲ್ಲಿ ಮಂಜೂರು ಮಾಡಬಲ್ಲ ಅರ್ಜಿಗಳ ಸಂಖ್ಯೆ ಎಷ್ಟು, ಮತ್ತು ವಿಸ್ತೀರ್ಣವೆಷ್ಟು;*

*ಆ) ಕಾನ್ ಮತ್ತು ಕುಮ್ಕಿ ಜಮೀನುಗಳ ಸಕ್ರಮೀಕರಣ ಅರ್ಜಿಗಳನ್ನು ಕಾನೂನು ವ್ಯಾಪ್ತಿಗೆ ತರುವಲ್ಲಿ ಭೂಕಂದಾಯ ಅಧಿನಿಯಮಕ್ಕೆ ತಿದ್ದುಪಡಿ ತರುವ ವಿಷಯ ಸರ್ಕಾರಕ್ಕಿದೆಯೇ, ಇಲ್ಲದಿದ್ದಲ್ಲಿ ಕಾರಣಗಳೇನು?*

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) 28,410 ಅರ್ಜಿಗಳು, 54,990-89 ಏಕರೆ ವಿಸ್ತೀರ್ಣ

| | ಅರ್ಜಿಗಳ ಸಂಖ್ಯೆ | ವಿಸ್ತೀರ್ಣ ಏಕರೆಗಳಲ್ಲಿ |
|---|---|---|
| ಈವರೆಗೆ ಮಂಜೂರಾದವು | 14191 | 22047-36 |
| ಈವರೆಗೆ ತಿರಸ್ಕೃತವಾದವು | 4145 | 8523-66 |
| ಬಾಕಿ ಇರುವುದು | 10074 | 24419-87 |

ಬಾಕಿ ಇರುವ ಅರ್ಜಿಗಳ ಪೈಕಿ ಕಾನೂನಿನ ಚೌಕಟ್ಟಿನಲ್ಲಿ ಮಂಜೂರು ಮಾಡಬಲ್ಲ ಅರ್ಜಿಗಳ ಸಂಖ್ಯೆ ಎಷ್ಟು ಎಂಬುದು ಸಮಿತಿಯಿಂದ ಸದರಿ ಅರ್ಜಿಗಳ ಪರಿಶೀಲನೆಯಾಗಿ ನಿರ್ಧಾರವಾದ ನಂತರ ಮಾತ್ರ ತಿಳಿದು ಬರುತ್ತದೆ.